

ಅಮ್ಮಗೆ ಹಬ್ಬ. ಕಿಟಕಿಯಿಂದ ಆಚೆಗೋಗಿದೆ ತಲೆ ನಾನು ಬಂದಿದ್ದೇ ಗೊತ್ತಾಗಿಲ್ಲ ಅವಳಿಗೆ' ಅಂದರು. ನಾನೇನು ಮಾತನಾಡಲಿಲ್ಲ. ಅವರು ಹೇಳಿದ್ದು ಸರಿನೇ. ಪೂರ್ಣಚಂದ್ರ ತೇಜಸ್ವಿಯವರ 'ಅಲೆಮಾರಿಯ ಅಂಡಮಾನ್'ನಲ್ಲಿ ಒಂದು ಕಡೆ ಜಗಳದ ವಿಷಯ ಪ್ರಸ್ತಾಪವಾಗಿದೆ. ಇಬ್ಬರು ಇಂಗ್ಲಿಷಿನಲ್ಲಿ ಜಗಳವಾಡಿದರಂತೆ. ಅದರಲ್ಲೇನು ಸ್ವಾರಸ್ಯವೇ ಇರುವುದಿಲ್ಲ. ಕನ್ನಡದಲ್ಲಾಗಿದ್ದರೆ ಒಂದೇ ಒಂದು ಬೈಗುಳ ಸಾಕಲ್ಲವೇ ಎಂದಿರುವುದನ್ನು ನೆನಪು ಮಾಡಿ ಕೊಂಡೆ. ಜಗಳಗಳಲ್ಲೂ ಕೆಲವು ಸತ್ಯ ಅಡಗಿರುತ್ತವೆ.

ಕೆಲವರಿಗೆ ಅವತ್ತಿಗೂ ಇವತ್ತಿಗೂ ಒಂದೊಂದು ಪೈಸೆಗೆ ಕಷ್ಟನೇ. ಕೆಲವರಿಗೆ ದುಡ್ಡಿನ ಬೆಲೆಯೇ ಗೊತ್ತಿಲ್ಲ. ದುಡ್ಡಿದ್ದವರನ್ನೇ ದುಡ್ಡು ಹುಡುಕಿಕೊಂಡು ಹೋಗುತ್ತದೆಯಂತೆ.

ಈ ದುಡ್ಡಿನ ಇತಿಹಾಸ ಇಂದು ನಿನ್ನೆಯದಲ್ಲ ಚೀನೀಯರ ಪರಿಕಲ್ಪನೆಯಂತೆ ಇದು. ಮುಂದೆ ಸೌತ್ ಈಸ್ಟ್‌ಗೆ ಹರಡಿ ಜಪಾನ್ ತಲುಪಿ ವಿಶ್ವವ್ಯಾಪಿಯಾಯಿತಂತೆ. ಮನುಷ್ಯ ಸತ್ತಾಗ ಬರಿಗೈಯ್ಲೇ ಹೋಗುವುದು ಎಂಬ ಸಂದೇಶ ಸಾರಿದ ಅಲೆಗ್ಸಾಂಡರ್‌ನನ್ನು 'ಫಾದರ್ ಆಫ್ ಕಾಯನ್ಸ್' ಅಂತಾರಂತೆ. ಭಾರತದ ಮಟ್ಟಿಗೆ ಹೇಳುವುದೇ